






## ಬಯಲಲ್ಲಿ ಕುರಿಕ್ಷೌರ

ಸುತ್ತಲೂ ಬಿಗಿದಿದ್ದ ಹಟ್ಟಿಯೊಳಗೆ ನಾಲ್ಕಾರು ಜನರು ಒಂದೊಂದಾಗಿ ಕುರಿಗಳನ್ನು ಹಿಡಿದು, ಕೆಡವಿ ಅದಾವುದೋ ಕೆಲಸದಲ್ಲಿ ಮಗ್ನರಾಗಿದ್ದರು. ಕುತೂಹಲಗೊಂಡು ಹತ್ತಿರ ಹೋಗಿ ನೋಡಿದರೆ ಅವರು ತಮ್ಮ ವಿಶಿಷ್ಟ ಕತ್ತರಿಗಳಿಂದ 'ಕುರಿಕ್ಷೌರ' ಮಾಡುತ್ತಿದ್ದರು. ಬೇಸಿಗೆ ಮುಗಿದು ಮಳೆಗಾಲ ಆರಂಭಗೊಳ್ಳುವ ಮುನ್ನ ಕುರಿಕ್ಷೌರ ಮಾಡಿಸುವುದು ಕುರಿಗಾಹಿಗಳ ಜವಾಬ್ದಾರಿ. ಇದರಿಂದ ಮಳೆಯಲ್ಲಿ ನೆನೆಯುವ ಕುರಿಗಳಿಗೆ ಅನಗತ್ಯ ರೋಗರುಜಿನಗಳು ಕಡಿಮೆಯಾಗುತ್ತವೆ. ಮೊದಲೆಲ್ಲಾ ಕುರಿ ಉಣ್ಣೆಯಿಂದ ಕಂಬಳಿಗಳ ತಯಾರಿಕೆ ನಡೆಯುತ್ತಿದ್ದರಿಂದ ಕುರಿಕ್ಷೌರಕ್ಕೂ ಹೆಚ್ಚಿನ ಬೇಡಿಕೆ ಇತ್ತು. ಆದರೆ ಆಧುನಿಕತೆಯ ಬಿರುಗಾಳಿಗೆ ಸಿಕ್ಕಿ ಈ ಉದ್ಯಮವು ಅವನತಿಯತ್ತ ಸಾಗಿರುವುದರಿಂದ ಕುರಿ ಉಣ್ಣೆಗೆ ಮುಂಚಿನ ಬೇಡಿಕೆ ಇಲ್ಲ ಹಾಗೂ ಕುರಿಕ್ಷೌರಿಕರೂ ಇಲ್ಲ.

ಕತ್ತರಿಸಲ್ಪಟ್ಟ ಕುರಿ ಉಣ್ಣೆಯು ಭೂಮಿಯನ್ನು ಸೇರಿ ಇತರ ಕೆಲವು ಜೀವಿಗಳಿಗೆ ಕಿರಿಕಿರಿ ಹಾಗೂ ತುಸು ಮಾಲಿನ್ಯಕ್ಕೂ ಕಾರಣವಾಗುತ್ತದೆ. ಪ್ರತಿ ಆರು ತಿಂಗಳಿಗೊಂದುವರ್ತಿಯಂತೆ ಕುರಿ ಉಣ್ಣೆಯನ್ನು ಕತ್ತರಿಸಲೇಬೇಕೆನ್ನುವ ಕುರಿಗಾಹಿಗಳು ಇದಕ್ಕಾಗಿ ಜಗಳೂರು, ಚಿತ್ರದುರ್ಗ ಭಾಗದ ಕುರಿಗಾರರನ್ನು ಅವಲಂಬಿಸಿದ್ದಾರೆ. ಕುರಿಗಳು ತಮ್ಮ ಉದ್ದನೆಯ ಕೂದಲಿನಿಂದ ಅಂಟುಪುಳಿಗಳಂತಹ ವಿವಿಧ ಸಸ್ಯಗಳ ಬೀಜಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಕಡೆಗೆ ಒಯ್ದು ಬೀಜಪ್ರಸರಣ ಮಾಡುತ್ತವೆ ಎನ್ನುವ ಮಾತೂ ಇದೆ. ಮಳೆಗಾಲಕ್ಕೂ ಮುನ್ನ ಕೂದಲು ಕತ್ತರಿಸಿಕೊಂಡು ಟ್ರಿಮ್ ಆಗುವ ಕುರಿಗಳು ಶಾಲಾಮಕ್ಕಳಂತೆ ಶಿಸ್ತಾಗಿ ಸಾಗುವುದನ್ನು ಕಾಣುವುದು ಸೋಜಿಗವೇ ಸರಿ.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**








## ಅಪರೂಪದ ಗೂಡು

ಇತ್ತೀಚೆಗೆ ಪೂಜೆಗೆಂದು ಒಂದು ಬನಕ್ಕೆ ಹೋಗಿದ್ದೆವು. ಅಲ್ಲಿ ನಮ್ಮ ದೃಷ್ಟಿ ಅಕಸ್ಮಾತ್ತಾಗಿ ತಾಳೆ ಮರದ ಮೇಲೆ ಬಿದ್ದಿತು. ಅದರ ಒಣಗಿದ ಗರಿಗಳೆಲ್ಲವೂ ನೇತಾಡುತ್ತಿದ್ದವು. ಒಂದೆರಡು ಗರಿಗಳ ಮೇಲೆ ಒಂದು ಬೃಹತ್ ಗೂಡು ಇತ್ತು. ಅದು ಪಕ್ಷಿಯದ್ದಲ್ಲ. ಜೇನು ಹುಳಕ್ಕಿಂತ ಸ್ವಲ್ಪ ದೊಡ್ಡದಾದ ಕೀಟ ಇದರ ಕರ್ತಾರ. ಇದು ಹಳದಿ ಮತ್ತು ಕಪ್ಪು ಬಣ್ಣ, ಸುಮಾರು ಎರಡು ಇಂಚು ಉದ್ದವಿರುತ್ತದೆ. ಈ ಕೀಟವನ್ನು ಇಲ್ಲಿ 'ಪಿಲಿಕುಂಡಲಿ' ಎಂದು ಕರೆಯುತ್ತಾರೆ. ಕೆಲವರು ಇದನ್ನು ಕಂಚುಗಾರ, ಕಣಜ ಅಂತಲೂ ಕರೆಯುತ್ತಾರೆ ಎಂಬ ಮಾಹಿತಿ ಇದೆ. ಪಿಲಿ ಅಂದರೆ ತುಳುಭಾಷೆಯಲ್ಲಿ ಹುಲಿ ಎಂದರ್ಥ. ಇದು ಹುಲಿಯ ತಲೆಯಷ್ಟು ಗಾತ್ರದ ಗೂಡನ್ನು ಕಟ್ಟುವುದರಿಂದ ಈ ಹೆಸರು ಬಂದಿರಬಹುದು.



ಈ ಗೂಡಿನ ರಚನೆಗೆ ಶಿಲಾನ್ಯಾಸ ಮಾಡಿದವರು ಯಾರೋ, ಕಾಮಗಾರಿಗೆ ಬಳಸಿದ ಕಚ್ಚಾ ವಸ್ತುಗಳು ಯಾವುವೋ, ನಿರ್ಮಾಣದ ಹಂತದಲ್ಲಿ ದುಡಿದ ಕೈಗಳೆಷ್ಟೋ, ಪೂರ್ಣ ನಿರ್ಮಾಣಕ್ಕೆ ತೆಗೆದುಕೊಂಡ ದಿನ, ವಾರ, ತಿಂಗಳುಗಳೆಷ್ಟೋ! ಎಲ್ಲವೂ ನಿಗೂಢ. ಆ ಗೂಡಿನ ಒಂದು ಬದಿಯಲ್ಲಿದ್ದ ರಂಧ್ರಗಳ ಮೂಲಕ ಅವುಗಳು ಹೊರಗೆ ಹೋಗುತ್ತವೆ. ಮತ್ತೊಂದು ಬದಿಯಲ್ಲಿ ಮೆಟ್ಟಲುಗಳಂಥ ವಿನ್ಯಾಸ ಕಾಣಬಹುದು. ಅದನ್ನು ನೋಡಿ, ಇವುಗಳಿಗೆ ನಕ್ಷೆ ತಯಾರಿಸಿಕೊಟ್ಟ ಎಂಜಿನಿಯರ್ ಯಾರಿರಬಹುದು ಎಂದು ಆಶ್ಚರ್ಯವಾಯಿತು. ಒಂದು ಕುಂಬಳಕಾಯಿಯಷ್ಟು ಗಾತ್ರದ ಗೂಡು. ಒಟ್ಟಾರೆಯಾಗಿ ಗಮನಿಸಿದರೆ ಹಾವಾಡಿಗರ ಪುಂಗಿಯಂತೆ ತೋರುತ್ತಿತ್ತು. ಈ ಅಪರೂಪದ ದೃಶ್ಯವನ್ನು ನೋಡಿ ಎಲ್ಲರೂ ಅವಕ್ಕಾಗಿ ಬಿಟ್ಟಿದ್ದೆವು.

**–ಪುಷ್ಪಾ ಎನ್.ಕೆ. ರಾವ್, ಉಡುಪಿ**